## ಎನ್‌ಐಟಿಕೆ ಅಲುಮ್ನಿ ಅಸೋಸಿಯೇಷನ್‌ನಿಂದ ಜಾಗತಿಕ ಸಮಾವೇಶ

# ಕಲಿತ ವಿದ್ಯಾಸಂಸ್ಥೆಯನ್ನು ಮರೆಯಬಾರದು


ಎನ್‌ಐಟಿಕೆ ಕ್ಯಾಂಪ್‌ನಲ್ಲಿ ಜಾಗತಿಕ ಸಮಾವೇಶ ಉದ್ಘಾಟನೆ

**ಮಂಗಳೂರು:** ಇಲ್ಲಿನ ಸುರತ್ಕಲ್ ಎನ್‌ಐಟಿಕೆಯ ಅಲುಮ್ನಿ ಅಸೋಸಿ ಯೇಶನ್ ವತಿಯಿಂದ ಜಾಗತಿಕ ಸಮಾವೇಶ ಎನ್‌ಐಟಿಕೆ ಕ್ಯಾಂಪಸ್ಸಿನಲ್ಲಿ ಡಿ.23 ಮತ್ತು 24ರಂದು ಆಯೋಜಿಸಲಾಗಿತ್ತು.

ಎನ್‌ಐಟಿಕೆ ನಿರ್ದೇಶಕ ಪ್ರೊ.ಪ್ರಸಾದ್ ಕೃಷ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಸಮಾವೇಶದ ಮೂಲಕ ಎಲ್ಲರೂ ಒಟ್ಟು ಸೇರುವಂತಾಗಿದೆ. ವಿದ್ಯಾರ್ಥಿಗಳು ಎಂದೂ ತಾವು ಕಲಿತ ವಿದ್ಯಾ ಸಂಸ್ಥೆಯನ್ನು ಮರೆಯಬಾರದು. ಎನ್‌ಐಟಿಕೆಯಲ್ಲಿ ಕಲಿತ ವಿದ್ಯಾರ್ಥಿಗಳು ದೇಶಾದ್ಯಂತ ಸೇವೆ ಸಲ್ಲಿಸುತ್ತಿದ್ದಾರೆ ಎಂಬುದು ಹೆಮ್ಮೆಯ ವಿಷಯ ಎಂದರು.

ಸಮಾವೇಶದಲ್ಲಿ 500ಕ್ಕೂ ಅಧಿಕ ಮಂದಿ ಹಳೆಯ ವಿದ್ಯಾರ್ಥಿಗಳು ಕುಟುಂಬ ಸಮೇತರಾಗಿ ಭಾಗವಹಿಸಿದ್ದರು. ಸಮಾವೇಶದ ಹಿನ್ನೆಲೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಎನ್‌ಐಟಿಕಿ ಹಳೆ ವಿದ್ಯಾರ್ಥಿ ಹಾಗೂ ಬ್ರೆಟನ್ ವುಡ್ಸ್ ಕಮಿಟಿಯ ಸದಸ್ಯ ಪ್ರೊ.ತ್ರಿಲೋಚನ್ ಶಾಸ್ತ್ರಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಪ್ರಮುಖರಾದ ರಂಗನ್ ರಾಮಸ್ವಾಮಿ, ಎಸ್.ಆರ್.ಬಾಲಾ, ಕೀರ್ತಿರಾಜ್, ವಿ.ಬಿ.ಪಾರ್ವತಿಕರ್ ಮತ್ತಿತರರು ಉಪಸ್ಥಿತರಿದ್ದರು.

Hasa Diganta, Date: 28/12/22, p.no- 12